

# ‘ಹಿಡ್ಲುಮನೆ’ ಜಲಪಾತ

■ ಚಿತ್ರಬರಹ:
**ಶಿವರಾಜ್ ಉಡುಪ, ಹೇರಂಬಾಪುರ**

ಹೊಸನಗರ ತಾಲ್ಲೂಕಿನಲ್ಲಿರುವ ಹಿಡ್ಲುಮನೆ ಜಲಪಾತ ಪ್ರಖ್ಯಾತ ಬೆಟ್ಟ ಕೊಡಚಾದ್ರಿಯ ತಪ್ಪಲಲ್ಲಿದೆ. ಈ ಜಲಪಾತವು ಮಳೆಗಾಲದ ಆಚೀಚಿನ ದಿನಗಳಲ್ಲಿ ಮಿಂಚಿ ಮರೆಯಾಗುತ್ತದೆ.

ಹೊಸನಗರ– ಕೊಲ್ಲೂರು ಮುಖ್ಯದಾರಿಯಲ್ಲಿ ಸಂಪೆಕಟ್ಟೆಯಿಂದ ಸ್ವಲ್ಪ ದೂರಕ್ಕೆ ಸಿಗುವ ಕೊಡಚಾದ್ರಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಹಿಡ್ಲುಮನೆ ಜಲಪಾತಕ್ಕೆ ಹೋಗುವ ದಾರಿಯಿದೆ. ಜಲಪಾತಕ್ಕೆ ಸುಮಾರು 1 ಕಿ.ಮೀ. ಇರುವಲ್ಲಿ ಈ ದಾರಿ ಕೊನೆಯಾಗುತ್ತದೆ. ಜಲಪಾತದಿಂದ ಬರುವ ತೊರೆಯ ಪಕ್ಕದಲ್ಲೇ ಇರುವ ದಾರಿಯಲ್ಲಿ ಪ್ರಕೃತಿ ಸೌಂದರ್ಯ ಆಸ್ವಾದಿಸುತ್ತಾ, ಕಾಣಸಿಗುವ ಚಿಕ್ಕ ಪುಟ್ಟ ಜಲಧಾರೆಗಳ ಸೌಂದರ್ಯ ಸವಿಯುತ್ತಾ ಸಾಗಿದರೆ ಸುಮಾರು 50 ಅಡಿ ಎತ್ತರದಿಂದ ಧುಮುಕುವ ಜಲಪಾತದ ದರ್ಶನವಾಗುತ್ತದೆ.

ಕೊಡಚಾದ್ರಿಯ ತಪ್ಪಲಿನ ತಣ್ಣನೆಯ ನೀರನ್ನು ಹೊತ್ತು ತರುವ ಜಲಪಾತವು ಬುಡದಲ್ಲಿ ನೀರಿನ ಕಿರು ಹೊಂಡವನ್ನು ಸೃಷ್ಟಿಸಿದೆ. ಆಳವಿಲ್ಲದ ಈ ಹೊಂಡದಲ್ಲಿ ಯಾರು ಬೇಕಾದರೂ ಇಳಿದು ಜಲಧಾರೆಯ ಬುಡಕ್ಕೇ ಹೋಗಬಹುದು. ಮಳೆಗಾಲದಲ್ಲಿ ಜಾರಿಕೆ ಮತ್ತು ಇಂಬಳದ ಕಾಟ ಹೆಚ್ಚು. ಸೆಪ್ಟೆಂಬರ್‌ನಿಂದ ಜನವರಿಯ ತನಕ ಸೂಕ್ತ ಕಾಲ. ಕೊಡಚಾದ್ರಿ ಅಥವಾ ಕೊಲ್ಲೂರಿಗೆ ಬರುವ ಪ್ರವಾಸಿಗರು ಜೊತೆಗೆ ಈ ತಾಣವನ್ನು ನೋಡಲು ಸಮಯ ಹೊಂದಿಸಿಕೊಳ್ಳಬಹುದು.